# ಸಂಡಿಗೆ

★ ರವಿರಾಜ ಹಾಲಂಬಿ



ಡಿ.ಕೆ.ರಮೇಶ್

'ಅಮ್ಮಾ.. ಕಳೆದ ವರ್ಷ ಹದಿನೈದು ದಿನಗಳಷ್ಟು ಕಾಲ ಹಪ್ಪಳ ಸಂಡಿಗೆ ಎಂದು ಮಾಡಿದ್ವಿ.. ಈ ಬಾರಿ ಅಷ್ಟೊಂದು ದಿನ ಬೇಡ. ಇವಳಿಗೂ ಕಷ್ಟ ಆಗುತ್ತೆ .. ಒಂದ್ಹತ್ತು ದಿನಗಳಲ್ಲಿ ಮುಗಿಯುವಂತೆ ಮಾಡಿಕೊಳ್ಳುವ ಆಗದೇ?', ಮಗರಾಯ ಕೇಳಿದ.

ಆಗಷ್ಟೇ ಕಸ ಗುಡಿಸಿ, ಈಗ ಹಜಾರದ ನೆಲ ಒರೆಸುತ್ತಿದ್ದ ಮಡದಿ ಮೇಲಿತ್ತು ಕಣ್ಣು. ಮಗ ಕೃಷ್ಣನ ಅಮ್ಮ ದೇವಕ್ಕ  ಅಂದ್ಲು. 'ಬರೇ ಹತ್ತು ದಿನ ಎಂತದು? ಒಂದು ಹನ್ನೆರಡು ದಿನಗಳಾದ್ರೂ ಸಂಡಿಗೆ ಬಿಡುವ. ಮೂರು ಮೂರು ಬಿಸಿಲಿನಂತೆ ನಾಲ್ಕು ಟ್ರಿಪ್ ನಲ್ಲಿ ಮುಗಿಸಿ ಬಿಡುವ, ಏನಂತಾಳೆ ಕೇಳು ನಿನ್ನ ಹೆಂಡ್ತಿ?' ಅಲ್ಲಿಯೇ ಗೋಡೆಗೆ ತಾಗಿಕೊಂಡಿದ್ದ ದಂಡೆಯ ಮೇಲೆ ಕುಳಿತು ಬತ್ತಿ ಹೊಸೆಯುತ್ತಿದ್ದವಳು ಮಗನಿಗೆ ಆದೇಶಿಸಿದಳು. ಕೃಷ್ಣ ಉಗುಳು ನುಂಗುತ್ತ ಕೇಳಿದ 'ರಾಧಾ.. ಹಾಗೇ ಮಾಡುವ ಆಗದಾ?' ರಾಧಾ ಸೂ ಅನ್ನಲೂ ಇಲ್ಲ , ಸುಕ್ಕಿನುಂಡೆ ಅನ್ನಲೂ ಇಲ್ಲ, ಇವರತ್ತ ತಿರುಗಿ ನೋಡಲೂ ಇಲ್ಲ!

ಈ ಹೊಸ ಮನೆಗೆ ಬಂದದ್ದು ಕಳೆದ ಬೇಸಗೆಯಲ್ಲಿಯೇ.. ಅದಕ್ಕೂ ಮುನ್ನ ಇದ್ದದ್ದು ಹಳೆಯ ಮಂಗಳೂರು ಹಂಚಿನ ಮನೆಯಲ್ಲಿ! ಸುತ್ತಲೂ ಅಡಿಕೆ ತೋಟ .. ಅಂಗಳದಲ್ಲಿ ಬಿಸಿಲೇ ಬೀಳುತ್ತಿರಲಿಲ್ಲ.. ಆದರೆ ಈಗಿನದ್ದು ತಾರಸಿ ಮನೆ. ಮೇಲ್ಗಡೆ ಏನಿಲ್ಲೆಂದರೂ ಬೆಳಿಗ್ಗೆ ಹತ್ತರಿಂದ ಸಂಜೆ ನಾಲ್ಕರ ತನಕ ಬಿಸಿಲಿಗೆ ಕೊರತೆ ಇರಲಿಲ್ಲ. ಹಳ್ಳಿ ಮನೆ, ಜೊತೆಗೆ ಮಕ್ಕಳ ಒಡ್ಡೋಲಗ. ಆದರೂ ಕಳೆದ ವರ್ಷ ಅವಳಲ್ಲಿ ಸಂಭ್ರಮ ಇತ್ತು. ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ತಿಂಡಿ ತೀರ್ಥ ತಯಾರಿ, ಕೊಟ್ಟಿಗೆ ಕೆಲಸ, ಮಕ್ಕಳ ಶಾಲೆಗಟ್ಟುವ ಕಾಯಕ.. ಎಲ್ಲವನ್ನೂ ಬಡಬಡನೆಂದು ಮಾಡಿ ಮುಗಿಸಿ ಸಂಡಿಗೆ ಕೆಲಸ ಎದ್ದು ಬಿದ್ದು ಮಾಡಿದ್ದಳು.

ಕರೆಂಟ್ ಕೈ ಕೊಟ್ಟಿದ್ದರೂ ರಟ್ಟೆ ದಣಿವಷ್ಟು ಅರೆಯುವ ಕಲ್ಲಿನಲ್ಲೇ ರುಬ್ಬಿ ಹಿಟ್ಟು ತಯಾರು ಮಾಡಿದ್ದಳು. ಒಣ ಹಾಕಲು ಚಾಪೆ , ಪ್ಲಾಸ್ಟಿಕ್ ಶೀಟು ಇವನ್ನೆಲ್ಲ ಫಳಫಳ ಹೊಳೆವಷ್ಟು ತೊಳೆದು ತಾರಸಿಯಲ್ಲಿ ಹರಡಿ, ಅಡುಗೆ ಮನೆಯಲ್ಲಿ ತಯಾರಿಸಿದ ಹಿಟ್ಟನ್ನು ಮೇಲೆ ಕೊಂಡೊಯ್ಯುವುದು, ಸಣ್ಣದಾಗಿ ಸಂಡಿಗೆ ಇಟ್ಟು ಖಾಲಿ ಪಾತ್ರೆ ಕೆಳಗೆ ತರುವುದು... ಮತ್ತೆ ತುಂಬಿಸಿ ಬಿರಬಿರನೆ ಮೇಲೆ... ಎಳೆ ಬಿಸಿಲು ಬಿರು ಬಿಸಿಲಾಗುವವರೆಗೂ ... ಬೆವರು ಬಸಿದಿದ್ದೆಷ್ಟೋ ಕಾಲು ಬಳಲಿದ್ದೆಷ್ಟೋ! ಅವುಗಳ ಪರಿವೇ ಇರಲಿಲ್ಲ.. ಮಧ್ಯಾಹ್ನದ ಸುಡು ಬಿಸಿಲೂ ಎನ್ನದೆ ಕಾಗೆ ಕೋತಿಗಳು ಎಂಜಲು ಮಾಡದಿರಲಿ ಎಂದು ತಲೆಗೆ ಸೆರಗು ಹೊದ್ದು ಕಣ್ಣಿಗೆ ಕಣ್ಣಿಟ್ಟು ಕಾದಿದ್ದಳು. ಬಿಸಿಲು ಮುಗಿದು ಡಬ್ಬಗಳಲ್ಲಿ ತುಂಬಿ ಮನೆಯ ಸ್ಟೋರ್ ರೂಮು ಸೇರಿದ್ದಾಗಿತ್ತು. ತನ್ನ ತವರಿಗೂ ಸ್ವಲ್ಪ ಕಳಿಸಿಕೊಡೋಣ ಅಂದುಕೊಂಡಿದ್ದಳು. ಆದರೆ ಆಗಿದ್ದೇ ಬೇರೆ! ರಜೆಗೆಂದು ಬಂದಿದ್ದ ಅಮ್ಮನ ಮುದ್ದಿನ ಮಗಳು ಸುಭದ್ರಾ, ಅಪರೂಪಕ್ಕೆ ಚಿತ್ತೈಸಿದ್ದ ಅಮ್ಮನ ತಂಗಿ, ತಮ್ಮ ಎಂದು ಎಲ್ಲರಿಗೂ ಹೊರಿಸಿ ಕೊಟ್ಟಾದ ಮೇಲೆ ಉಳಿದಿದ್ದು ಖಾಲಿ ಡಬ್ಬಿ ಮಾತ್ರ! ಜೊತೆಗೆ ಖಾಲಿಯಾಗಿತ್ತು ಅವಳ ಉತ್ಸಾಹ ... ತವರಿಗೆ ಬರಿಗೈನಲ್ಲೇ ಹೋಗಿ ಬಂದಿದ್ದಳು. ಹೀಗಿರಲು ಸಂಡಿಗೆ ಶಬ್ದ ಕಿವಿಗೆ ಬಿದ್ದರೆ ಮೈ ಉರಿವಷ್ಟು ಕೋಪ ಉಕ್ಕದಿರುತ್ತದೆಯೇ?

ಕೃಷ್ಣ ಸಂಜೆ ಪೇಟೆಯಿಂದ ಬರಬೇಕಾದರೆ ಸಂಡಿಗೆಗೆ ಬೇಕಾದ ಸಾಮಾನೆಲ್ಲ ತಂದ. ಅಮ್ಮನೂ ಮಾಮೂಲಿನಂತೆ ಹಜಾರದಲ್ಲೇ ಕುಳಿತಿದ್ದಳು.

'ರಾಧಾ .. ಕಳೆದ ಬಾರಿ ಏನೋ ಅಚಾತುರ್ಯ ನಡೆದು ಹೋಯ್ತು .. ಈ ಬಾರಿ ಹಾಗಾಗಲು ಬಿಡಲ್ಲ.. ನಿನ್ನ ತವರಿಗಂತ ಬೇರೆ ಡಬ್ಬದಲ್ಲಿ ಮೊದಲೇ ಎಷ್ಟು ಬೇಕೋ ಅಷ್ಟು ತೆಗೆದಿಟ್ಟುಕೊಂಡು ಬಿಡು. ಸುಭದ್ರಾ ಫೋನ್ ಮಾಡಿದ್ಲು, ಕಳೆದ ವರ್ಷದ್ದು ಚೆನ್ನಾಗಿದೆ, ಅತ್ತಿಗೆ ಹತ್ರ ಹೇಳಿ ತನಗೂ ಸ್ವಲ್ಪ ಮಾಡಿಸು ಅಂದಿದ್ದಾಳೆ. ನೀನು ಮನಸ್ಸು ಮಾಡಬೇಕಷ್ಟೇ'  ಅಮ್ಮನತ್ತ ತಿರುಗಿ ಅಂದ.

'ಹೌದಲ್ವಾ ಅಮ್ಮಾ? ಇವಳ ಅಣ್ಣನಿಗೆ ಕೊಡುವಷ್ಟು ಮೊದಲೇ ಎತ್ತಿಟ್ಟುಕೊಂಡು ಬಿಡಲಿ ಆಗದೇ?'

ಮುದುಕಿಗೆ ಬೆಳಿಗ್ಗೆಯೇ ಅರಿವಾಗಿತ್ತು .. ಈ ಬಾರಿ ಕೆಲಸವಾಗದು ಎಂದು. ಒಪ್ಪದೇ ನಿರ್ವಾಹ ಇರಲಿಲ್ಲ. ಈಕೆಯೋ   ಕ್ಷಮಯಾ ಧರಿತ್ರಿ ! ಬತ್ತಿದ್ದ ಉತ್ಸಾಹ ಮತ್ತೆ ಪುಟಿದೆದ್ದಿತು. ಚಿಗರೆಯಂತೆ ಸಾಮಾನುಗಳನ್ನು ಒಳ ಕೊಂಡು ಹೋದಳು. ಅಡುಗೆ ಮನೆಯಲ್ಲೀಗ ಡಬ್ಬಗಳ ಸದ್ದು.. ಮಿಕ್ಸರ್ ಗ್ರೈಂಡರ್ ಗಳ ಸದ್ದು. ಅಮ್ಮ ಮಗನಿಂದ 'ಸದ್ಯ ಬದುಕಿ ಕೊಂಡೆವು' ಅನ್ನುವ ಸಮಾಧಾನದ ನಿಟ್ಟುಸಿರ ಸದ್ದು!